

## ನಾಂದಿಪದ

# ಆರ್ದ್ರತೆ ಘನತೆಯ ಸಹಪಯಣ



ಮಯೂರದ ಮಾರ್ಚ್ ಸಂಚಿಕೆ, ಆರ್ದ್ರತೆ ಹಾಗೂ ಘನತೆಯಿಂದ ಕೂಡಿದ ಮಹಿಳಾ ಸಂವೇದನೆಗಳ ವಿಶಿಷ್ಟ ಬಗೆಯ ಸಂಕಲನ. ಈ ಸಂಚಿಕೆಯ ಕಥೆ, ಕವಿತೆ ಹಾಗೂ ವಿಮರ್ಶೆಗಳಲ್ಲಿ ಸ್ತ್ರೀಧ್ವನಿಯೇ ಮುಖ್ಯವಾಗಿದೆ. ಇಲ್ಲಿನ ಮಹಿಳಾ ಸಂವೇದನೆ ಕಥೆ-ಕಾವ್ಯಕ್ಕಷ್ಟೇ ಸೀಮಿತವಾದುದಲ್ಲ; ವೈಚಾರಿಕತೆಯ ಹೊಳಪು ಹೊಳಹನ್ನೂ ಒಳಗೊಂಡಿರುವಂತಹದ್ದು.

ನಯನಾ ಕಾಶ್ಯಪ್ ಅವರ 'ಭಾರತೀಯ ಮಹಿಳಾ ಸಾಹಿತ್ಯ: ನವಯುಗದ ನವಾನ್ವೇಷಣೆ' ಸಮೀಕ್ಷೆ ಹಾಗೂ ಪದ್ಮಾ ಶ್ರೀರಾಮ್ ಅವರ ಸಂದರ್ಶನ ಈ 'ಮಹಿಳಾ ಸಂಚಿಕೆ'ಯ ವಿಶೇಷಗಳಲ್ಲಿ ಮುಖ್ಯವಾದವು. ನಯನಾ ಅವರ ಸಮೀಕ್ಷೆ ಸಮಕಾಲೀನ ಬರಹಗಾರ್ತಿಯರ ಸಾಹಿತ್ಯದ ಬೀಸುನೋಟ ಆಗಿರುವುದರ ಜೊತೆಗೆ, ಭಾರತೀಯ ಸಾಹಿತ್ಯದ ವೈವಿಧ್ಯ ಹಾಗೂ ಸಮೃದ್ಧಿಯನ್ನು ಸೂಚಿಸುವಂತಿದೆ. ಪದ್ಮಾ ಶ್ರೀರಾಮ್ ಅವರೊಂದಿಗಿನ ಮಾತುಕತೆ ಸಾಹಿತ್ಯದಿಂದ ಸಂಪನ್ನಗೊಂಡ ಮಾಗಿದ ವ್ಯಕ್ತಿತ್ವವೊಂದನ್ನು ಸಹೃದಯರಿಗೆ ಪರಿಚಯಿಸುವ ಆಪ್ತ ಪ್ರಯತ್ನವಾಗಿದೆ.

ಕಳೆದ ಮೂರು ವರ್ಷಗಳಿಂದ ಪ್ರಕಟಗೊಂಡ ಎಂ.ಎಸ್. ಶ್ರೀರಾಮ್ ಅವರ 'ಪಠಣ ಕುತೂಹಲ' ಅಂಕಣ ಈ ಸಂಚಿಕೆಯಲ್ಲಿ ಕೊನೆಗೊಂಡಿದೆ. ಭಿನ್ನ ರುಚಿಗಳ ಇಂಗ್ಲಿಷ್ ಪುಸ್ತಕಗಳನ್ನು ಪರಿಚಯಿಸುತ್ತಿದ್ದ ಶ್ರೀರಾಮ್ ಅವರ ಬರಹಗಳು, ನಮ್ಮ ಕಾಲದ ಆಗುಹೋಗುಗಳು ಹಾಗೂ ವಿರೋಧಾಭಾಸಗಳನ್ನು ಅರ್ಥ ಮಾಡಿಕೊಳ್ಳಲು ನೆರವಾಗುವ ಒಳನೋಟಗಳನ್ನುಳ್ಳ ಟಿಪ್ಪಣಿಗಳೂ ಆಗಿವೆ. ಓದುಗರ ಮನಸ್ಸಿನಲ್ಲಿ ಬಹುಕಾಲ ಉಳಿಯುವ 'ಪಠಣ ಕುತೂಹಲ' ಸಹೃದಯರಿಗೆ 'ಓದುವ ದಾರಿ'ಗಳನ್ನೂ ಪರಿಚಯಿಸಿದೆ ಎನ್ನುವುದು 'ಮಯೂರ ಬಳಗ'ದ ನಂಬಿಕೆ.

**–ಮಯೂರ ಬಳಗ**

**editormy@mayura.co.in**